ಮಾಸ್ತರರು. ತಂದೆ ಮತ್ತು ಮಗ ಮಾಸ್ತರರ ಕೊನೆಯ ಶಬ್ದಗಳು ಕಿವಿಗೆ ಬೀಳದಷ್ಟು ದೂರ ಹೋಗಿಯಾಗಿತ್ತು.

ಬಾಗಿಲ ಬಳಿಯಿದ್ದ ಮಾಸ್ತರರ ಹೆಂಡತಿ ಮುಗುಳ್ನಗುತ್ತ ಮಾತು ಆರಂಭಿಸಿದರು :

'ಆ ಹುಡುಗನನ್ನು ಕಂಡಿರಾ ಇವತ್ತು?'

'ಎಂತಕ್ಕೆ?'

'ಏನಾದ್ರೂ ವಿಶೇಷ ಕಂಡಿತಾ?'

'ಚಿತ್ರಾನ್ನ ಚಪ್ಪರಿಸಿ ತಿಂತಿದ್ದ. ಅವಕ್ಕೆಲ್ಲ ಅಷ್ಟು ರುಚಿಯಿದ್ದದ್ದು ಎಲ್ಲಿ ಸಿಗಲಿಕ್ಕೆ.'

'ಅದಲ್ಲ... ನೋಡುವಾಗ ಹೇಗೆ ಕಂಡಾ?'

'ನಿಂದೇನೇ ಹೊಸತು... ದಲಿತರ ಹುಡುಗ ದಲಿತರ ಹಾಗೇ ಕಾಣ್ತಿದ್ದ.'

'ಸುಳ್ಳು... ನೀವ್ ಗಮನಿಸ್ಲೇ ಇಲ್ಲ ಹಂಗಾರೆ...'

'ಏನೇ... ಬಿಡಿಸಿ ಹೇಳೇ... ಏನ್ ವಿಶೇಷ ಇತ್ತ್?'

'ಅವನ ಅಂಗಿ ಸ್ವಲ್ಪ ಚಿಂದಿಯಾಗಿತ್ತ್. ನಮ್ಮ ಮಾಣಿ ಟೈಟ್ ಆಗುತ್ತೆ ಅಂದಿದ್ದ್ ಶರ್ಟ್ ಒಂದಿತ್ತ್. ಭಾವನ ಮಾಣಿಗ್ ಕೊಡೋಣ ಅಂತ ತೆಗೆದಿಟ್ಟಿದ್ದೆ. ಅದನ್ನ ಕೊಟ್ಟೆ. ಆತ ಹಾಕಿಕೊಂಡಾಗ ನಮ್ ಮಾಣಿ ಹಂಗೇ ಕಂಡಿದ್ದ ನಂಗೆ.'

'ನಿಂದ್ ಒಂದೊಂದ್ ಖಯಾಲಿ... ನಗು ಬರುತ್ತೆ ನನಗೆ' ಎಂದ ಮಾಸ್ತರರು, 'ಈಗ ಕಂಡಿಯಲ್ಲ, ನ್ಯಾಯ ಕೇಳಾಕ್ ಬಂದಿದ್ರ್. ನಾಳೆ ಪುನಃ ಬರ್ತಾವು. ಶಂಖದಾಸಂಗೆ ಕೊಟ್ಟಂಗೆ ಹಳೇ ಅಂಗಿ ಕೊಟ್ಟ್ ಮಾನ ಕಳೆದ್ರಿ ಅಂತಾವ್ ಕಾಣ್' ಅಂದರು ಮಾಸ್ತರರು.

'ಹೇ... ಬರಲಿ ಬರಲಿ ಕಾಂಬ... ನಾ ಯಾರಿಗ್ ಹೆದ್ರುದಿಲ್ಲೆ. ಅವನಿಗೆ ಹೊಸಾ ಶರ್ಟ್ ತಂದುಕೊಡಿ... ನಾನು ಕೊಟ್ಟದ್ದ ನಂಗೇ ವಾಪಸ್ ಕೊಡಿ ಅಂದ್ರಾಯ್ತ್. ಪಾಪ ಹುಡುಗ, ಚಿಂದಿ ಶರ್ಟ್ ಹಾಕಿತ್ತ್ ಅಂತ ನಾನು ಬೇರೆ ಶರ್ಟ್ ಕೊಟ್ರೆ ಅದೇನ್ ನ್ಯಾಯ ಕೇಳ್ತರಾ ನಾನೂ ಕಾಣ್ತೆ' ಬುಸುಗುಡುತ್ತ ಒಳಗೆ ನಡೆದರಾಕೆ. ತನ್ನದೇನೂ ತಪ್ಪಿಲ್ಲ ಎಂಬ ಆಕೆಯ ದೃಢವಿಶ್ವಾಸದ ಮಾತಿಗೆ ಮಾಸ್ತರರು ಚರ್ಚೆಗಿಳಿಯಲಿಲ್ಲ.

★★★

ಮಗ ಮಾಸ್ತರರ ಬಾಯಿಯಿಂದ ಇವತ್ತಾದರೂ ಬಚಾವ್ ಆದುದಕ್ಕೆ ಖುಷಿಯಾಗಿದ್ದ. 'ದಿನಾ ಹೀಗೆ ಬಂದುನಿಂತರೆ ಉಳಿದ ಮಕ್ಕಳೆದುರು ನನ್ನನ್ನು ಅವರು ಬೈಯುವುದಿಲ್ಲ. ಸುಮ್ಮನೆ ನಿನ್ನಿಂದಾಗಿಯೇ ನನಗೆ ಬೈಗಳು' ದೂರುವ ಧಾಟಿಯಲ್ಲಿ ನುಡಿದ ಮಗ. ಅಪ್ಪ ಮಾತಾಡಲಿಲ್ಲ.

'ಅಪ್ಪ ಇಲ್ನೋಡು... ಮಾಸ್ತರರ ಹೆಂಡತಿ ಈ ಅಂಗಿ ಕೊಟ್ಟರು. ಅವರ ಮಗನಿಗೆ ಟೈಟ್ ಆಗುತ್ತಂತೆ... ನೀನು ಹಾಕೋ ಅಂದ್ರು. ನನ್ನ ಶರ್ಟು ಹರಿದೋಗಿತ್ತಲ್ಲ... ಅದಿಕ್ಕೆ' ಅಂದ ಹುಡುಗ. 'ಒಳ್ಳೇ ತಿಂಡಿ ಕೂಡ ಕೊಟ್ರು... ಹೆಚ್ಚು ಉಳಿದಿತ್ತು, ನೀನು ತಿನ್ನು ಅಂದ್ರು'

'ಅವರಿಗೆ ಬೇಡದ್ದು, ಹೆಚ್ಚು ಉಳಿದದ್ದು ಅದನ್ನೆಲ್ಲ ನಮಗೆ ಕೊಡೋದು. ನೀನು ನಾಚಿಕೆಯಿಲ್ಲದವರಂಗೆ ಅದನ್ನೆಲ್ಲ ತೆಗೆದುಕೊಂಡು ನನಗೆ ಅವಮಾನ ಮಾಡ್ತಾ ಇದ್ದೀಯ. ಇನ್ಮೇಲೆ ಅವರೇನು ಕೊಡಲಿಕ್ಕೆ ಬಂದರೂ ನನಗೆ ಅದೆಲ್ಲ ಬೇಡ ಅನ್ನು. ಅರ್ಥವಾಯಿತಾ?' ಸಿಡುಕಿ ನುಡಿದ ಅಪ್ಪನ ಮಾತು ಕೇಳಿ ತಲೆಬುಡ ಅರ್ಥವಾಗದಿದ್ದರೂ ಸುಮ್ಮನಾದ ಹುಡುಗ.

★★★

'ದಾಮೋದರ್... ಈ ಬಾರಿ ಟೀಚರ್ಸ್ ಡೇಗೆ ಹನ್ನೆರಡು ಮಂದಿಗೆ ಪ್ರಶಸ್ತಿ ಕೊಡೋಣ. ನನ್ನ